ಆ) ಈಗಾಗಲೇ ಈ ಘಟಕಗಳಿಗೆ ವೈದ್ಯರುಗಳನ್ನು ತೈನಾತಿ ಮಾಡಲಾಗಿದೆ. ಆದರೆ ಅವರು ಗಳು ಇನ್ನೂ ಕೆಲಸಕ್ಕೆ ಹಾಜರಾಗಿವುದಿಲ್ಲ. ಆದುದರಿಂದ ಪಕ್ಕದ ಹಳ್ಳಿಯ ವೈದ್ಯರುಗಳನ್ನು ಈ ಘಟಕಗಳಿಗೆ ಪ್ರಭಾರ ಕಾರ್ಯನಿರ್ವಹಿಸಲು ನಿಯೋಜಿಸಲಾಗಿದೆ.

ಇ) –ಡಿಟೋ–

ರಾಜ್ಯದಲ್ಲಿ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ನಡೆದಿರುವ ಬಗ್ಗೆ

೩೬ (೧೨೩) (ಬಿ)—ಶ್ರೀ ರಾಜುಗೌಡ (ಹಾನೂರು).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ೧೯೮೫–೮೬ ಮತ್ತು ೧೯೮೬–೮೭ರಲ್ಲಿ ಇದುವರೆವಿಗೆ ಈ ರಾಜ್ಯದಲ್ಲಿ ಎಷ್ಟು ಜನ ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ನಡೆದಿದೆ ?

ಆ) ಇದರ ಬಗ್ಗೆ ಎಷ್ಟು ಮೊಕದ್ದಮೆಗಳು ದಾಖಲಾಗಿವೆ, ಎಷ್ಟರಲ್ಲಿ ಆರೋಪಿಗಳು ಶಿಕ್ಷೆಗೆ ಗುರಿಯಾಗಿದ್ದಾರೆ ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು) —

ಅ)

೧೯೮೫–೮೬	೧೯೮೬–೮೭
೫೬	೨೭

ಆ)

ದಾಖಲಾದ ಪ್ರಕರಣಗಳು	ಶಿಕ್ಷೆಯಾದ ಪ್ರಕರಣಗಳು	ಪೂರ್ಣ ಮಾಹಿತಿ ಲಭ್ಯವಿಲ್ಲ
೫೬	೧	

ಗ್ರಾಮಾಂತರ ಪ್ರದೇಶಗಳಲ್ಲಿ ಹಸಿರು ಕಾರ್ಡುಗಳ ವಿತರಣೆ ಸಮರ್ಪಕಗೊಳಿಸುವ ಬಗ್ಗೆ

೩೭ (೨೮೭) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಕಾನೂನು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಇಲ್ಲಿಯವರೆಗೆ ವಿತರಣೆಯಾಗಿರುವ ಹಸಿರು ಕಾರ್ಡುಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಗ್ರಾಮಾಂತರ (ಪ್ರದೇಶಗಳಲ್ಲಿ) ಬಡತನ ರೇಖೆಯ ಕೆಳಗೆ ಬದುಕುತ್ತಿರುವ ಸಾವಿರಾರು ಕೃಷಿಕಾರ್ಮಿಕರಿಗೆ ಹಸಿರು ಕಾರ್ಡುಗಳು ಸಿಗದೇ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಈ) ಹಲವಾರು ಅರ್ಹರಲ್ಲದ ಕುಟುಂಬಗಳಿಗೆ ಹಸಿರು ಕಾರ್ಡುಗಳನ್ನು ಕೊಟ್ಟಿರುವುದು ಈ ಪರಿಸ್ಥಿತಿಗೆ ಕಾರಣವಾಗಿದೆಯೇ ?

ಉ) ಈ ಅಸಮರ್ಪಕ ವಿತರಣೆಯನ್ನು ಸರಿಪಡಿಸಲು ಸರ್ಕಾರದವರು ಕ್ರಮ ಕೈಗೊಂಡಿದ್ದಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ೩೦.೦೯ ಲಕ್ಷ.

ಆ) ಬಂದಿದೆ.

ಇ) ಎಲ್ಲಾ ಭೂರಹಿತ ಕೃಷಿ ಕಾರ್ಮಿಕರನ್ನು ಹಾಗೂ ವಾರ್ಷಿಕ ಕೌಟುಂಬಿಕ ಆದಾಯ ರೂ. ೩೫೦೦-೦೦ ಕ್ಕಿಂತ ಕಡಿಮೆ ಇರುವ ಎಲ್ಲಾ ಗ್ರಾಮೀಣ ಕುಟುಂಬಗಳಿಗೆ ಹಸಿರು ಕಾರ್ಡುಗಳನ್ನು ನೀಡಲಾಗಿದೆ.

ಈ) ಇಲ್ಲ.

ಉ) ಕ್ರಮ ಕೈಗೊಳ್ಳಲಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಆರೋಗ್ಯ ಅಧಿಕಾರಿಗಳ ಕಛೇರಿಯಲ್ಲಿ ಮಾಡಿದ ನೇಮಕಾತಿ ಬಗ್ಗೆ

೩೯ (೨೦೨) ಶ್ರೀ ಆರ್.ಎನ್. ನಾಯ್ಕ (ಭಟ್ಕಳ).—ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಈಗಿನ ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಆರೋಗ್ಯ ಅಧಿಕಾರಿಗಳು ಆ ಜಿಲ್ಲೆಯಲ್ಲಿ ತಮ್ಮ ಸೇವಾವಧಿಯಲ್ಲಿ ಎಷ್ಟು ಜನ ನೌಕರರನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದಾರೆ ?

ಆ) ಯಾವ ವರ್ಗದ ಕೆಲಸಕ್ಕೆ ಸೇರಿದವರು ಹಾಗೂ ಅವರ ಸಂಖ್ಯೆ ಎಷ್ಟು ?

ಇ) ಎಲ್ಲಾ ನೌಕರರನ್ನು ತುಂಬಿಕೊಳ್ಳುವಾಗ ಹಾಲಿ ಕೆಲಸ ಮಾಡುತ್ತಿರುವ ನೌಕರರುಗಳ ಬಡ್ತಿ ವಿಚಾರವನ್ನು ಗಣನೆಗೆ ತೆಗೆದುಕೊಳ್ಳಲಾಗಿದೆಯೇ ?

ಈ) ಅಂತಹ ನೇಮಕಾತಿಗೆ ಸರ್ಕಾರದಿಂದ ಪೂರ್ವಾನುಮತಿ ಪಡೆಯಲಾಗಿತ್ತೆ, ಅಥವಾ ನಂತರ ಅನುಮತಿ ನೀಡಲಾಗಿದೆಯೇ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಅಬ್ಕಾರಿ ಸಚಿವರು).—

ಅ) ೩೨ ಜನರನ್ನು

ಆ) 'ಡಿ' ವರ್ಗದವರು ೩೨ ಜನರು

ಇ) ಡಿ ವರ್ಗದ ಹುದ್ದೆಗಳನ್ನು ಭರ್ತಿ ಮಾಡುವಾಗ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಈ) ಡಿ ವರ್ಗದ ನೌಕರರನ್ನು ನೇಮಕ ಮಾಡಿಕೊಳ್ಳಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೇ ಅಧಿಕಾರವಿರುವುದರಿಂದ ಅನುಮತಿ ಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದ ಉಚ್ಚ ನ್ಯಾಯಾಲದಲ್ಲಿ ಮುಖ್ಯ ನ್ಯಾಯಾಧೀಶರ ಹಾಗೂ ಇತರ ನ್ಯಾಯ ಮೂರ್ತಿಗಳ ನೇಮಕದ ಬಗ್ಗೆ

೪೦ (೩೧೪) ಶ್ರೀ ಜ್ಞಾನದೇವ ದೊಡ್ಡ ಮೆಂಟಿ (ರೋಣ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಮುಖ್ಯ ನ್ಯಾಯಾಧೀಶರ ಹಾಗೂ ಇತರ ಕೆಲವು ನ್ಯಾಯಮೂರ್ತಿಗಳ ಹುದ್ದೆಗಳು ಖಾಲಿ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಗೌರವಾನ್ವಿತ ಹುದ್ದೆಗಳನ್ನು ತುಂಬುವಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ ರಾಜ್ಯ ಸರ್ಕಾರದವರು ಕೈಕೊಂಡ ಕ್ರಮಗಳೇಳು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ಈ ಹುದ್ದೆಗಳಿಗೆ ಕೇಂದ್ರ ಸರ್ಕಾರವು ನೇಮಕ ಮಾಡಬೇಕು. ಈ ಬಗ್ಗೆ ಸರ್ಕಾರವು ಸೂಕ್ತ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಕಳುಹಿಸಿದೆ. ಜ್ಞಾಪನ ಪತ್ರಗಳನ್ನು ಬರೆಯಲಾಗಿದೆ.

ಮುಖ್ಯ ನ್ಯಾಯಾಧೀಶರ ಹುದ್ದೆಯನ್ನು ತುಂಬುವ ಬಗ್ಗೆ ಕೇಂದ್ರ ಸರ್ಕಾರವು ಈಗಾಗಲೇ ಆದೇಶ ಹೊರಡಿಸಿದೆ.